**ಸ್ಪೆಷಲ್ ಕೇಸ್ ನಂ.256/2019 ಪಿಡಬ್ಲ್ಯೂ.2**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 29.01.2025**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಡಿ ಆರ್ ವಕೀಲರಿಂದಃ**

1. ನಾನು ಎಸ್ ಎಸ್ ಎಲ್ ಸಿ ವರೆಗೆ ಓದಿದ್ದೇನೆ. ಹುಟ್ಟಿದಾಗಿನಿಂದ ನಾನು ಮಂಡ್ಯ ಸಿಟಿಯಲ್ಲಿರುವುದರಿಂದ ಮಂಡ್ಯ ನಗರಸಭೆ ಎಲ್ಲಿ ಬರುತ್ತದೆಂದು ನನಗೆ ಗೊತ್ತು. ಆ ಜಾಗ ನಮಗೆ ಸೇರಿದ್ದು ಎಂದು ತೋರಿಸಲು ನಗರಸಭೆ ನೀಡಿರುವ ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ. ನನ್ನ ಬಳಿ ಯಾವುದೇ ನಿವೇಶನ, ಮನೆ ಇಲ್ಲ ಹೀಗಾಗಿ ಮನೆ ಕೊಡಿ ಎಂದು ಕೊಳಚೆ ನಿರ್ಮೂಲನಾ ಮಂಡಳಿಗೆ ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಅವರು ನನಗೆ ಜಾಗ ಕೊಟ್ಟು ಮನೆ ಕಟ್ಟಿ ಕೊಡುತ್ತೇವೆಂದು ಹೇಳಿದ್ದರು. ಮನೆ ಕಟ್ಟಿಕೊಡುವವರಗೂ ನಾವು ತಾತ್ಕಾಲಿಕವಾಗಿ ಷೆಡ್ ನಲ್ಲಿದ್ದೆವು ಎಂದರೆ ಸರಿ. ಮುಂದುವರೆದು ತಾತ್ಕಾಲಿಕವಾಗಿ ಅಲ್ಲಿ ಇರಿ ಎಂದು ಅವರು ಹೇಳಿರಲಿಲ್ಲ. ಈ ರೀತಿ ನಿರಾಶ್ರಿತರಿಗೆ ಅಧಿಕಾರಿಗಳು ಹೇಳಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ಘಟನೆಗಿಂತ 2-3 ದಿವಸದ ಹಿಂದೆ ಷೆಡ್ ನಾನು ಕಿತ್ತು ಹಾಕಿದ್ದೆ. ಆಗ ನಮ್ಮ ಮನೆಯವರೆಲ್ಲಾ ಅದೇ ಜಾಗದಲ್ಲಿ ಮಲಗುತ್ತಿದ್ದೆವು. ನನ್ನ ಜಾಗ ಮಂಡ್ಯ ನಗರಸಭೆಗೆ ಸೇರುತ್ತದೆಂದರೆ ಸರಿ. ಮನೆ ಕಟ್ಟುವ ಸಂಬಂಧ ನಗರಸಭೆಯಿಂದ ಲೈಸೆನ್ಸ್ ಪಡೆದುಕೊಂಡಿಲ್ಲ.

3. ಷೆಡ್ ಹಾಕಲು ಹೋದಾಗ 1ನೇ ಆರೋಪಿ ನಮ್ಮ ಮೇಲೆ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿ. ಆಗ ಪೊಲೀಸರು ನನ್ನನ್ನು ಹಾಗೂ ನಮ್ಮ ಕುಟುಂಬದವರನ್ನು ಠಾಣೆಗೆ ಕರೆಯಿಸಿ ಜಾಗ ನಮ್ಮದಲ್ಲ ಅದು 1 ನೇ ಆರೋಪಿಗೆ ಸೇರಿದ್ದು, ಜಾಗ ಖಾಲಿ ಮಾಡಿಕೊಡಿ ಎಂದು ಹೇಳಿದ್ದರು ಎಂದರೆ ಸರಿ. ಠಾಣೆಯಲ್ಲಿ ಪೊಲೀಸರ ಮುಂದೆ ಜಾಗ ನನ್ನದು ಎಂದು ತೋರಿಸುವ ಯಾವುದೇ ದಾಖಲೆಯನ್ನು ನಾನು ಕೊಟ್ಟಿರಲಿಲ್ಲ ಎಂದರೆ ಸರಿ.

4. ನಾನು ಕಟ್ಟಡ ಕಟ್ಟುತ್ತಿರುವ ಜಾಗದ ಅಕ್ಕ ಪಕ್ಕ ವಾಸದ ಮನೆಗಳು ಇವೆ. ಕಟ್ಟಡ ಕಾಮಗಾರಿ ಮಾಡುವ ಸಮಯದಲ್ಲಿ ಸ್ಥಳಕ್ಕೆ ಪೊಲೀಸರೊಂದಿಗೆ 1 ನೇ ಆರೋಪಿ ಬಂದಿದ್ದನು, ಆಗ ಕೂಡ ಪೊಲೀಸರು ಜಾಗ 1 ನೇ ಆರೋಪಿಯದ್ದು ಇಲ್ಲಿ ಕಟ್ಟಡ ಕಟ್ಟಬೇಡಿ ಎಂದು ತಿಳುವಳಿಕೆ ಹೇಳಿದ್ದರು ಎಂದರೆ ಸರಿ. ಆ ಸಮಯದಲ್ಲಿ 1 ನೇ ಆರೋಪಿ ಠಾಣೆಯಲ್ಲಿದ್ದನು ಎಂದರೆ ಸರಿ. ನಂತರ ಪೊಲೀಸರು ಸ್ಥಳಕ್ಕೆ ಬಂದಿದ್ದರು. ಆಗ ಆರೋಪಿತರು ಯಾರೂ ಸ್ಥಳದಲ್ಲಿರಲಿಲ್ಲ ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಜೀಪಿನಲ್ಲಿ ಕರೆದುಕೊಂಡು ಅಂಬುಜ ಪಾರ್ಕ್ ಗೆ ಹೋಗಿ ಆರೋಪಿತರನ್ನು ಕರೆದುಕೊಂಡು ಹೋದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಹೇಳಿಕೆಯಲ್ಲಿ ನಂತರ ಪಶ್ಚಿಮ ಠಾಣೆಯ ಸಬ್ ಇನ್ಸ್ ಪೆಕ್ಟರ್ ರವರು ನನ್ನನ್ನು ತಮ್ಮ ಜೊತೆ ಜೀಪಿನಲ್ಲಿ ಸಿಬ್ಬಂದಿಯೊಡನೇ ನಮ್ಮ ಮನೆಯನ್ನು ಉರುಳಿಸಿದವರ ಪತ್ತೆ ಬಗ್ಗೆ ಕೆಎ-02-ಜಿ-0853 ರ ಸರ್ಕಾರಿ ಜೀಪಿನಲ್ಲಿ ಕರೆದುಕೊಂಡು ಹೋದರು. ನಾವು ಮಂಡ್ಯ ಸಿಟಿ 100 ಅಡಿ ರಸ್ತೆ, ಗಾಂಧಿನಗರ ಕಡೆಯಿಂದ ಶಂಕರನಗರ ಕಡೆಗೆ ಹೋದಾಗ ನಮ್ಮ ಮನೆಯನ್ನು ಉರುಳಿಸಿದವರು, ಶಂಕರನಗರದ ಅಂಬುಜಮ್ಮನ ಪಾರ್ಕ್ ಬಳಿ ಗುಂಪಾಗಿ ಕುಳಿತ್ತಿದ್ದವರನ್ನು ನಾನು ನೋಡಿ ಅವರುಗಳನ್ನು ಗುರ್ತಿಸಿ ಪಿಎಸ್‌ಐ ರವರಿಗೆ ಇವರುಗಳೇ ನಮ್ಮ ಮನೆಯನ್ನು ಕೆಡವಿ ಗಲಾಟೆ ಮಾಡಿ ಹೊಡದವರು ಎಂದು ತೋರಿಸಿದೆ, ಪಿಎಸ್‌ಐ ರವರುಗಳು ಅವರುಗಳನ್ನು ಮದ್ಯಾಹ್ನ ಸುಮಾರು 3-35 ಗಂಟೆ ಸಮಯದಲ್ಲಿ ಸಿಬ್ಬಂದಿ ಸಮೇತಾ ಹಿಡಿದುಕೊಂಡು ಅವರುಗಳ ಹೆಸರು, ವಿಳಾಸವನ್ನು ಕೇಳಿದರು" ಎಂಬ ಹೇಳಿಕೆಯ ಭಾಗವನ್ನು ನಿಡಿ.1 ಎಂದು ಗುರುತಿಸಲಾಗಿದೆ.

5. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 2 ರಲ್ಲಿ ತಿಳಿಸಿರುವ ಹಾಗೇ "ಆಗ ನಾನು ಸ್ಥಳಕ್ಕೆ ಬಂದಾಗ ಗೇಟ್ ಲಾಕ್ ಮಾಡಿಕೊಂಡು ಅವರೆಲ್ಲರೂ ಮನೆಯನ್ನು ಹಾರೆ, ರೀಪೀಸ್ ಪಟ್ಟಿ ತಂದು ಉರುಳಿಸುತ್ತಿದ್ದರು, ನಾವು ಕೇಳಿದ್ದಕ್ಕೆ ಅವರು ಹೊಲೆಯ ಸೂಳೆ ಮಕ್ಕಳಾ ಜಾಗ ನಮ್ಮದು ಎಂದು ಅವ್ಯಾಚ ಶಬ್ಧಗಳಿಂದ ಬೈದು, ಚಾಸಾ.7 ರವರಿಗೆ ಕೆಳಗೆ ಬೀಳಿಸಿ ಹೊಟ್ಟೆಯ ಮೇಲೆ ತುಳಿದರು, ಚಾಸಾ.1, 3 ರಿಂದ 6 ರವರಿಗೆ ಹೊಡೆದರು. ಅಷ್ಟರಲ್ಲಿ ಪೊಲೀಸರು ಸ್ಥಳಕ್ಕೆ ಬಂದು 15-20 ಜನರನ್ನು ಹಿಡಿದುಕೊಂಡರು" ಎಂದು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ. ನನ್ನ

ಮುಖ್ಯ ವಿಚಾರಣೆಯ ಕಂಡಿಕೆ 1 ರಲ್ಲಿ ತಿಳಿಸಿರುವ ಹಾಗೇ "ನಮ್ಮ ತಾತನ ಕಾಲದಿಂದಲೂ ಗಾಂಧಿನಗರ, 6 ನೇ ಕ್ರಾಸ್ ನಲ್ಲಿ ಷೆಡ್ ಹಾಕಿಕೊಂಡು ಚಾಸಾ.1, 3 ರಿಂದ 7 ರವರು ವಾಸ ಇದ್ದೇವೆ" ಎಂದು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿದ್ದೇನೆ. ಈ ರೀತಿ ಹೇಳಿಕೆ ಕೊಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

6. ನಾನು ನಮ್ಮ ಮನೆಯಲ್ಲಿ ನಮ್ಮ ಕುಟುಂಬದವರೊಂದಿಗೆ ಇದ್ದಾಗ 1 ನೇ ಆರೋಪಿ ಪೊಲೀಸರೊಂದಿಗೆ ಬಂದು ಆ ಜಾಗದಲ್ಲಿ ಮನೆ ಕಟ್ಟಬೇಡಿ ಎಂದು ಹೇಳಿದ್ದನು ಎಂದರೆ ಸರಿ. ಆಗ ಸುತ್ತ ಮುತ್ತಲಿನ 100-150 ಜನರು ಸೇರಿದ್ದರು. 1 ಹಾಗೂ 2 ನೇ ಆರೋಪಿತರು ನಮ್ಮ ಮನೆಯ ಹತ್ತಿರ ಬಂದಾಗ ನಾವು ಅವರೊಂದಿಗೆ ಗಲಾಟೆ ಮಾಡಿ ಮಾರಣಾಂತಿಕ ಹಲ್ಲೆ ಮಾಡಿದ್ದೆವು ಎಂದರೆ ಸರಿಯಲ್ಲ.

7. ನಾನು ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದಾಗ 1 ನೇ ಆರೋಪಿ ಕೇಳಿದ್ದಕ್ಕೆ ನಾನು ಹಲ್ಲೆ ಮಾಡಿದ್ದು ಆತ ನನ್ನ ವಿರುದ್ಧ ದೂರು ಸಲ್ಲಿಸಿ ಇದೇ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ.

8. ದೂರು ಕೊಡುವ ಮುನ್ನ 1 ನೇ ಆರೋಪಿ ನನ್ನ ಹಾಗೂ ನನ್ನ ಮನೆಯವರ ಮೇಲೆ ದೂರು ಕೊಟ್ಟಿದ್ದನು ಎಂದರೆ ಸರಿ. ಆಸ್ತಿ ನಮಗೆ ಸೇರಿದ್ದು ಎಂದು ಸಿವಿಲ್ ನ್ಯಾಯಾಲಯದಲ್ಲಿ ಕೇಸು ಹಾಕಿಲ್ಲ ಎಂದರೆ ಸರಿ. ನನ್ನನ್ನು ಸ್ಥಳದಿಂದ ಖಾಲಿ ಮಾಡಿಸುವ ಸಂಬಂಧ 1 ನೇ ಆರೋಪಿ ನನ್ನ ಮೇಲೆ ಓ ಎಸ್ 508/2019 ದಾವೆ ಹೂಡಿದ್ದನು ಎಂದರೆ ಸರಿ. ಅದ ಈಗಲೂ ವಿಚಾರಣಾ ಹಂತದಲ್ಲಿದೆ.

9. ನಮಗೆ ಆರೋಪಿತರು ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿ, ಆಸ್ತಿಗೆ ಹಾನಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದೂರು ಕೊಡುವ ಮುನ್ನ ನಾನು ಆಸ್ಪತ್ರೆಗೆ ಹೋಗಿರಲಿಲ್ಲ ಎಂದರೆ ಸರಿ. ನಾನು ನನ್ನ ತಂದೆ ಜೊತೆ ದೂರು ಕೊಡಲು ಹೋದಾಗ 1 ನೇ ಆರೋಪಿ ನಮ್ಮ ವಿರುದ್ಧ ಕೇಸು ಹಾಕಿರುವ ವಿಚಾರ ಗೊತ್ತಾಯಿತು ಎಂದರೆ ಸರಿ. ಈ ವಿಷಯ ತಿಳಿದ ಕೂಡಲೇ ನಾನು ಹಾಗೂ

ಕುಟುಂಬಸ್ಥರು ತಲೆ ಮರೆಸಿಕೊಂಡಿದ್ದೆವು ಎಂದರೆ ಸರಿಯಲ್ಲ. ಷೆಡ್ ಹಾಕಿದ್ದ ಜಾಗ ನನ್ನದ್ದಲ್ಲ, ಅದು 1ನೇ ಆರೋಪಿಯದ್ದು ಅಲ್ಲಿ ನಾನು ಅಕ್ರಮವಾಗಿ ಷೆಡ್ ಹಾಕಿದ್ದೇನೆಂದರೆ ಸರಿಯಲ್ಲ. ಆಸ್ತಿಯನ್ನು ಹೇಗಾದರೂ ಮಾಡಿ ಲಪಟಾಯಿಸಿಕೊಳ್ಳಬೇಕೆಂದು ಆರೋಪಿತರ ವಿರುದ್ಧ ಸುಳ್ಳು ಕೇಸು ಹಾಕಿದ್ದೇನೆಂದರೆ ಸರಿಯಲ್ಲ. ಮು.ಮಾ.1 ರಿಂದ 4 ಅನ್ನು ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ.

10. ನನ್ನನ್ನು ಠಾಣೆಗೆ ಕರೆಯಿಸಿರಲಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.